ಸಿ.ಸಿ. ನಂಬರಃ 637/2022
ಪಿ.ಡಬ್ಲ್ಯೂಃ 5

ದಿಃ 18-11-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 2ನೇ ಆರೋಪಿ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

ದಿಃ29-11-2024 ರಂದು ನೀವು ಏನೆಂದು ಕೆಲಸ ಮಾಡುತ್ತಿದ್ದೀರಿ ಎಂದರೆ ಸಾಕ್ಷಿಯು ಪ್ರಭಾರ ಆಹಾರ ನಿರೀಕ್ಷಕರಾಗಿ ಕೆಲಸ ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ಕೆಲಸ ಯಾವುದು ಎಂದರೆ ಸಾಕ್ಷಿಯು ಕಂದಾಯ ನಿರೀಕ್ಷಕರು, ಬೆಲೆಕೇರಿ ಎಂದು ನುಡಿಯುತ್ತಾರೆ. ನ್ಯಾಯಾಲಯಕ್ಕೆ ಸಂಬಂಧಿಸಿದ ದಾಖಲೆಗೆ ಓದಿ ತಿಳಿದುಕೊಂಡು ಸಹಿ ಮಾಡಬೇಕಾಗುತ್ತದೆ ಎಂದರೆ ಸರಿ. ನೀವು ದಿಃ29-11-2024 ರಂದು ನ್ಯಾಯಾಲಯದ ಮುಂದೆ ನೀಡಿದ ಸಾಕ್ಷಿದಾಖಲೆಯನ್ನು ಓದಿ ತಿಳಿದುಕೊಂಡು ಸಹಿ ಮಾಡಿರುತ್ತೀರಿ ಎಂದರೆ ಸರಿ. ಅದರಲ್ಲಿ ಏನಾದರೂ ತಪ್ಪು ಕಂಡುಬಂದರೆ ನ್ಯಾಯಾಲಯದ ಗಮನಕ್ಕೆ ತಂದು ಸರಿಪಡಿಸಬಹುದು ಎಂಬ ಸಾಮಾನ್ಯ ಜ್ಞಾನ ನಿಮಗೆ ಇರುತ್ತದೆ ಎಂದರೆ ಸರಿ. ದಿಃ28-05-2021 ರಂದು ಚಾಸಾ-1 ರವರಿಗೆ ಯಾರಿಂದ ಕರೆ ಬಂದಿರುತ್ತದೆ ಎಂದರೆ ಸಾಕ್ಷಿಯು ತಹಶೀಲ್ದಾರ ಇವರಿಂದ ಬಂದಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-1 ರವರಿಗೆ ಕರೆ ಬಂದಾಗ ನೀವು ಎಲ್ಲಿ ಇದ್ದೀರಿ ಎಂದರೆ ಸಾಕ್ಷಿಯು ನಾನು ಕಚೇರಿಯಲ್ಲಿ ಇದ್ದೆ ಎಂದು ನುಡಿಯುತ್ತಾರೆ. ಆಹಾರ ನಿರೀಕ್ಷಕರ

ಕಚೇರಿಯಲ್ಲಿ ಇದ್ದೀರಾ ಅಥವಾ ಕಂದಾಯ ನಿರೀಕ್ಷಕರ ಕಚೇರಿಯಲ್ಲಿ ಇದ್ದೀರಾ ಎಂದರೆ ಸಾಕ್ಷಿಯು ಆಹಾರ ನಿರೀಕ್ಷಕರ ಕಚೇರಿಯಲ್ಲಿ ಇದ್ದೇನು ಎಂದು ನುಡಿಯುತ್ತಾರೆ. ಕಂದಾಯ ನಿರೀಕ್ಷಕರ ಕಚೇರಿ ಮತ್ತು ಆಹಾರ ನಿರೀಕ್ಷಕರ ಕಚೇರಿ ಮಧ್ಯ ಎಷ್ಟು ಅಂತರ ಇರುತ್ತದೆ ಎಂದರೆ ಸಾಕ್ಷಿಯು 5-6 ಕಿ.ಮೀ ಇರುತ್ತದೆ ಎಂದು ನುಡಿಯುತ್ತಾರೆ. ಎರಡೂ ಕಚೇರಿಗಳ ಕೆಲಸದ ಸಮಯ ಏನು ಎಂದರೆ ಸಾಕ್ಷಿಯು ಬೆಳಿಗ್ಗೆ 10 ರಿಂದ 5.30ಗಂಟೆಯವರೆಗೆ ಎಂದು ನುಡಿಯುತ್ತಾರೆ. ಆ ದಿನ ಬೆಳಿಗ್ಗೆ 6.30 ಗಂಟೆಗೆ ಆಹಾರ ನಿರೀಕ್ಷಕರ ಕಚೇರಿಗೆ ಬರಲು ಏನಾದರೂ ವಿಶೇಷ ಕಾರಣ ಇತ್ತಾ ಎಂದರೆ ಸಾಕ್ಷಿಯು ತಹಶೀಲ್ದಾರ ಇವರು ಕರೆ ಮಾಡಿ ಬರಲು ಹೇಳಿದ್ದರಿಂದ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಕರೆ ಮಾಡಿದ್ದರು ಎಂದರೆ ಸಾಕ್ಷಿಯು 6 ಗಂಟೆಗೆ ಕರೆ ಮಾಡಿದ್ದು, ನಾನು ಬೆಳಿಗ್ಗೆ 6.30 ಗಂಟೆಗೆ ಹೋಗಿರುತ್ತೆನೆ ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ತಹಶೀಲ್ದಾರ ಯಾರು ಇದ್ದರು ಎಂದರೆ ಸಾಕ್ಷಿಯು ಉದಯ ಕುಂಬಾರ ಎಂಬುವವರು ಇದ್ದರು ಎಂದು ನುಡಿಯುತ್ತಾರೆ. ಆಹಾರ ನಿರೀಕ್ಷಕರ ಕಚೇರಿಯಲ್ಲಿ ಚಲನವಲನ ವಹಿ ಇರುತ್ತದಾ ಎಂದರೆ ಸಾಕ್ಷಿಯು ಇರುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿಯು ಮುಂದುವರೆದು, ಪ್ರಭಾರ ಇದ್ದಾಗ ಎರಡೂ ಕಡೆ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಆಹಾರ ನಿರೀಕ್ಷಕರ ಕಚೇರಿಯಲ್ಲಿ ಇದ್ದ ಚಲನವಲನ ವಹಿಯಲ್ಲಿ ಮಂಜುಗುಣಿಗೆ ಈ ಕಾಣಕ್ಕಾಗಿ ಹೋಗುತ್ತಿದ್ದೇವೆ ಎಂದು ಏನಾದರೂ ನಮೂದು ಮಾಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನೀವು ಆ

ಸಮಯದಲ್ಲಿ ಆಹಾರ ನಿರೀಕ್ಷಕರು ಆಗಿದ್ದೀರಿ ಎಂದು ತೋರಿಸಲು ಪೊಲೀಸರಿಗೆ ಏನಾದರೂ ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

2. ಪಡಿತರ ಅಕ್ಕಿಯನ್ನು ಆಯಾಯ ಸೊಸೈಟಿಗಳಿಗೆ ಇಷ್ಟು ಇಷ್ಟು ಪ್ರಮಾಣದಲ್ಲಿ ಕೊಡಬೇಕು ಎಂದರೆ ಸರಿ. ಪಡಿತರದಾರರು ಸೊಸೈಟಿಗಳಿಂದ ಅಕ್ಕಿಯನ್ನು ಪಡೆದುಕೊಂಡು ಹೋಗುತ್ತಾರೆ ಎಂದರೆ ಸರಿ. ಸೊಸೈಟಿಗೆ ಹೋದ ಅಕ್ಕಿ ಹಾಗೂ ಪಡಿತರದಾರರು ಅಲ್ಲಿಂದ ಪಡೆದುಕೊಂಡ ಅಕ್ಕಿಯ ಬಗ್ಗೆ ಸೊಸೈಟಿಯಲ್ಲಿ ರಜಿಸ್ಟರನ್ನು ಮೆಂಟೇನ್ ಮಾಡಿರುತ್ತಾರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸೊಸೈಟಿಗೆ ಭೇಟಿ ಕೊಟ್ಟು ಸ್ಟಾಕ್ ರಜಿಸ್ಟರನ್ನು ಪರಿಶೀಲನೆ ಮಾಡುವ ಅಧಿಕಾರ ನಿಮಗೆ ಇರುತ್ತದೆ ಎಂದರೆ ಸರಿ. ನೀವು ಪರಿಶೀಲನೆಗೆ ಹೋದಾಗ ಯಾವತ್ತಾದರೂ ಸೊಸೈಟಿಗೆ ನೀಡಿದ ಪಡಿತರ ಅಕ್ಕಿಗೆ ಹಾಗೂ ಸ್ಟಾಕ್ ರಜಿಸ್ಟರಿನಲ್ಲಿ ನಮೂದು ಆದ ಅಕ್ಕಿಯ ಬಗ್ಗೆ ವ್ಯತ್ಯಾಸ ಆಗಿರುವುದು ಕಂಡುಬಂದಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಯಾರಾದರೂ ಪಡಿತರದಾರರು ನಮಗೆ ಸೊಸೈಟಿಯಿಂದ ಪಡಿತರ ಅಕ್ಕಿ ಬಂದಿರುವುದಿಲ್ಲ ಎಂದು ನಿಮಗೆ ದೂರು ಏನಾದರೂ ಬಂದಿತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

3. ಆಹಾರ ನಿರೀಕ್ಷಕರಾಗಿ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದೀರಿ ಎಂದರೆ ಸಾಕ್ಷಿಯು 2021 ನೇ ಸಾಲಿನಿಂದ ಸಲ್ಲಿಸುತ್ತಿದ್ದೇನೆ ಎಂದು ನುಡಿಯುತ್ತಾರೆ. ನಿಮ್ಮ ಸೇವಾಅವಧಿಯಲ್ಲಿ ಪಡಿತರ ಅಕ್ಕಿಗೆ ಸಂಬಂಧಪಟ್ಟಂತೆ ಎಷ್ಟು ಪ್ರಕರಣಗಳನ್ನು ದಾಖಲಿಸಿರುತ್ತೀರಿ ಎಂದರೆ ಸಾಕ್ಷಿಯು ಈ ಪ್ರಕರಣ ಸೇರಿ ಒಟ್ಟು 2 ಪ್ರಕರಣಗಳನ್ನು

ದಾಖಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಆ ಪ್ರಕರಣದಲ್ಲಿ ಸಾಕ್ಷಿ ಕೊಟ್ಟಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಪಡಿತರ ಅಕ್ಕಿ ಹಾಗೂ ಬೇರೆ ಅಕ್ಕಿಗೆ ಏನಾದರೂ ಗುರುತಿಸುವ ವ್ಯತ್ಯಾಸ ಇರುತ್ತಾ ಎಂದರೆ ಸಾಕ್ಷಿಯು ಇಲ್ಲ ಒಂದೇ ತರ ಇರುತ್ತದೆ ಎಂದು ನುಡಿಯುತ್ತಾರೆ. ಪಡಿತರ ಅಕ್ಕಿ ಬೇರೆ ಬೇರೆ ಜಾತಿಯ ಬೇರೆ ಬೇರೆ ಸ್ಥಳಗಳಿಂದ ಬರುತ್ತದೆ ಎಂದರೆ ಸರಿ. ಈ ಪ್ರಕರಣದಲ್ಲಿಯ ಪಡಿತರ ಅಕ್ಕಿಯು ಎಲ್ಲಿಂದ ಬಂದಿರುತ್ತದೆ ಎಂದು ನಿಮಗೆ ಖಚಿತವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿ.

4. ಆ ದಿನ ನೀವು ಹೋಗಿರುತ್ತೀರಿ ಎಂದು ಹೇಳಿದ ದಿನ ಯಾವ ರಸ್ತೆಯ ಮೇಲೆ ಹೋಗಿರುತ್ತೀರಿ ಎಂದರೆ ಸಾಕ್ಷಿಯು ಕೆಳಗಿನ ಮಂಜುಗುಣಿಗೆ ಹೋಗಲು ಒಂದೇ ರಸ್ತೆ ಇದ್ದು, ಬಾಸ್ಕೋಡದಿಂದ ಹೋಗಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಹೋದೇವು ಎಂದ ಸಂದರ್ಭದಲ್ಲಿ ವಾಹನದ ಮುಂದೆ ಇದ್ದೀರಾ ಅಥವಾ ಹಿಂದೆ ಇದ್ದೀರಾ ಎಂದರೆ ಸಾಕ್ಷಿಯು ವಾಹನದ ಹಿಂದೆ ಇದ್ದೇವು ಎಂದು ನುಡಿಯುತ್ತಾರೆ. ಎಷ್ಟು ಹೊತ್ತು ಹಿಂಬಾಲಿಸಿರುತ್ತೀರಿ ಎಂದರೆ ಸಾಕ್ಷಿಯು ಮಂಜುಗುಣಿಯಿಂದ ಎರಡೂವರೆ ಕಿ.ಮೀ ವರೆಗೆ ಹಿಂಬಾಲಿಸಿರುತ್ತೇವೆ ಎಂದು ನುಡಿಯುತ್ತಾರೆ. ಓವರಟೇಕ್ ಮಾಡಿ ವಾಹನ ನಿಲ್ಲಿಸಿರುತ್ತೀರಾ ಎಂದರೆ ಸಾಕ್ಷಿಯು ನಮ್ಮ ವಾಹನವನ್ನು ಟಾಟಾ ಏಸ್ ವಾಹನದ ಮುಂದುಗಡೆ ಓವರಟೇಕ್ ಮಾಡಿಕೊಂಡು ಹೋಗಿ ನಿಲ್ಲಿಸಿರುತ್ತೇವೆ ಎಂದು ನುಡಿಯುತ್ತಾರೆ.

5. ವಾಹನದ ಚಾಲಕ ಯಾವ ದಿಕ್ಕಿಗೆ ಓಡಿ ಹೋಗಿರುತ್ತಾನೆ ಎಂದರೆ ಸಾಕ್ಷಿಯು ಪಶ್ಚಿಮ ದಿಕ್ಕಿಗೆ ಎಂದು ನುಡಿಯುತ್ತಾರೆ. ಕೆಳಗಿನ ಮಂಜುಗುಣಿಯಲ್ಲಿ ಒಂದಕ್ಕೊಂದು ತಾಗಿ ಸಾಕಷ್ಟು ಮನೆಗಳು ಇದ್ದು, ಜನವಸತಿ ಪ್ರದೇಶ ಎಂದರೆ ಸರಿ. ಮೀನುಗಾರರ ಮನೆಗಳಲ್ಲಿ ಬೆಳಿಗ್ಗೆ ಬೇಗನೇ ಎದ್ದು, ತಮ್ಮ ಕೆಲಸಕ್ಕೆ ಹೊಗುತ್ತಿರುತ್ತಾರೆ ಎಂದರೆ ಇರಬಹುದು, ಆದರೆ ನನಗೆ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ನೀವು ಹೋದೇವು ಎಂದು ಹೇಳಿದ ದಿನದಂದು ಕೆಳಗಿನ ಮಂಜುಗುಣಿಯಲ್ಲಿ ಜನರು ಏನಾದರೂ ಓಡಾಡುತ್ತಿದ್ದರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಜನರು ಓಡಾಡುತ್ತಿದ್ದರು ಎಂದು ಪೊಲೀಸರಿಗೆ ಹೇಳಿಕೆ ಕೊಟ್ಟಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ಯಾವ ದಿನ ಪೊಲೀಸರಿಗೆ ಹೇಳಿಕೆ ನೀಡಿರುತ್ತೀರಿ ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಇದ್ದ ಜನರನ್ನು ಓಡಿ ಹೋದವರು ಯಾರು ಎಂದು ವಿಚಾರಣೆ ಮಾಡಿರುತ್ತೀರಾ ಎಂದರೆ ಮಾಡಿರುತ್ತೇವೆ, ಓಡಿ ಹೋದವನ ಹೆಸರು ಜಗನ್ನಾಥ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಯಾರನ್ನು ವಿಚಾರಣೆ ಮಾಡಿರುತ್ತೀರಿ, ಅವರ ಹೆಸರು ವಿಳಾಸ ಏನಾದರೂ ಇದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಕಂದಾಯ ನಿರೀಕ್ಷಕರಿಗೆ ಆಯಾ ಪ್ರದೇಶಗಳ ಜನಗಳ ಪರಿಚಯ ಇರುತ್ತದೆ ಎಂದರೆ ಸರಿ. ಚಾಸಾ-1 ರವರಿಗೆ ನೀವು ಯಾರನ್ನು ಕೇಳಿರುತ್ತೀರಿ ಎಂದು ಪರಿಚಯವಿರುತ್ತಾ ಎಂದರೆ ಅವರಿಗೆ ಗೊತ್ತಿರಬಹುದು, ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಕಾರ ನೀವು ಜನರನ್ನು ಕೇಳಿದ

ಸಂದರ್ಭದಲ್ಲಿ ಚಾಸಾ-1 ರವರು ನಿಮ್ಮ ಜೊತೆ ಇದ್ದರಾ ಎಂದರೆ ಹೌದು ಎಂದು ನುಡಿಯುತ್ತಾರೆ.

6. ನಿಮ್ಮ ಪ್ರಕಾರ ಅಕ್ಕಿ ಚೀಲವನು ಎಲ್ಲಿ ತೂಕ ಮಾಡಿರುತ್ತೀರಿ ಎಂದರೆ ಸಾಕ್ಷಿಯು ಗೊಡೌನಿನಲ್ಲಿ ಎಂದು ನುಡಿಯುತ್ತಾರೆ. ಗೊಡೌನ್ ಎಲ್ಲಿ ಇರುತ್ತದೆ ಎಂದರೆ ಸಾಕ್ಷಿಯ ಎ ಪಿ ಎಂ ಸಿ ಒಳಗಡೆ ಇರುತ್ತದೆ ಎಂದು ನುಡಿಯುತ್ತಾರೆ. ಎ ಪಿ ಎಂ ಸಿ ಯಿಂದ ಕೆಳಗಿನ ಮಂಜುಗುಣಿ ಎಷ್ಟು ದೂರವಾಗುತ್ತದೆ ಎಂದರೆ ಸಾಕ್ಷಿಯು ಅಂದಾಜು 10 ಕಿ.ಮೀ ಆಗುತ್ತದೆ ಎಂದು ನುಡಿಯುತ್ತಾರೆ. ಯಾರಿಗೆ ಸೇರಿದ ಗೊಡೌನ್ ಆಗಿರುತ್ತದೆ ಎಂದರೆ ಸಾಕ್ಷಿಯು ಸರಕಾರಕ್ಕೆ ಸೇರಿದ್ದು ಎಂದು ನುಡಿಯುತ್ತಾರೆ. ಗೊಡೌನ್ ನೋಡಿಕೊಳ್ಳಲು ಉಸ್ತುವಾರಿ ಇರುತ್ತಾರಾ ಎಂದರೆ ಇರುತ್ತಾರೆ ಎಂದು ನುಡಿಯುತ್ತಾರೆ. ಯಾರು ಉಸ್ತುವಾರಿ ಇರುತ್ತಾರೆ ಎಂದರೆ ಸಾಕ್ಷಿಯು ಉಪ ನಿರ್ದೇಶಕರು, ಆಹಾರ ಇಲಾಖೆಯವರು ಇರುತ್ತಾರೆ ಎಂದು ನುಡಿಯುತ್ತಾರೆ. ನೀವೇನಾದರೂ ಅವರಿಗೆ ಗೊಡೌನ್ ನಲ್ಲಿ ಈ ರೀತಿ ಅಕ್ಕಿ ಚೀಲವನ್ನು ದಾಸ್ತಾನು ಮಾಡುತ್ತೇವೆ ಎಂದು ಮಾಹಿತಿ ಕೊಟ್ಟಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಕೆಳಗಿನ ಮಂಜುಗುಣಿಯಿಂದ ಗೊಡೌನ್ ವರೆಗೆ ಯಾರು ಟಾಟಾ ಏಸ್ ವಾಹನವನ್ನು ಚಾಲನೆ ಮಾಡಿಕೊಂಡು ಹೋಗಿರುತ್ತಾರೆ ಎಂದರೆ ಸಾಕ್ಷಿಯು ಚಾಲಕ ಹೆಸರು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಚಾಲಕನನ್ನು ಯಾರು ಕರೆದಿರುತ್ತಾರೆ ಎಂದರೆ ಸಾಕ್ಷಿಯು ಚಾಸಾ-1 ರವರು ಕರೆದಿರುತ್ತಾರೆ ಎಂದು ನುಡಿಯುತ್ತಾರೆ. ಚಾಲಕನಿಗೆ ಏನಾದರೂ

ಬಾಡಿಗೆ ಹಣವನ್ನು ಕೊಟ್ಟಿರುತ್ತೀರಾ ಎಂದರೆ ಅದರ ಬಗ್ಗೆ ಗೊತ್ತಿರುವುದಿಲ್ಲ. ಹಣ ಕೊಟ್ಟರೆ ಸರಕಾರಕ್ಕೆ ಖರ್ಚನ್ನು ಹಾಕಬೇಕಾಗುತ್ತದೆ ಎಂದರೆ ಸರಿ. ಅಕ್ಕಿಯನ್ನು ಯಾರು ಅನ್ ಲೋಡ್ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಹಮಾಲರು ಇದ್ದು, ಅವರಿಂದ ಮಾಡಿಸಿರುತ್ತೇವೆ ಎಂದು ನುಡಿಯುತ್ತಾರೆ. ಹಮಾಲರ ಹೆಸರು ಏನು ಎಂದರೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಅಕ್ಕಿಯನ್ನು ತೂಕ ಮಾಡಿ ಒಳಗೆ ಇರಿಸಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲನ್ನು ವಿನಂತಿ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಜೆ ಎಂ ಎಫ್ ಸಿ, ಅಂಕೋಲಾ.